92

ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು

ಸಂಖ್ಯೆ:ಎನ್‌ಆರ್. ೬/143/16-17 ದಿನಾಂಕ: /11/2016
03-12-2016

## ಸುತ್ತೋಲೆ

ವಿಷಯ: ಶುಶ್ರೂಷ ಅಧೀಕ್ಷಕರು ದರ್ಜೆ-1ರ ಹುದ್ದೆಯಿಂದ ಸಹಾಯಕ ನಿರ್ದೇಶಕರು (ಶುಶ್ರೂಷ ಶಿಕ್ಷಣ ಮತ್ತು ಶುಶ್ರೂಷ ತರಬೇತಿ) ಹುದ್ದೆಗೆ ಪದೋನ್ನತಿ ನೀಡುವ ಬಗ್ಗೆ.

ಉಲ್ಲೇಖ: ಈ ನಿರ್ದೇಶನಾಲಯದ ಅಧಿಕೃತ ಜ್ಞಾಪನಾ ಪತ್ರ ಸಂ: ಎನ್‌ಆರ್‌ಎಸ್(1)90/09-10 ದಿನಾಂಕ:04.03.2016

* * * * *

ಆರೋಗ್ಯ ಮತ್ತು ಕು.ಕ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶುಶ್ರೂಷ ಅಧೀಕ್ಷಕರು ದರ್ಜೆ-1 ಇವರಿಗೆ ಸಹಾಯಕ ನಿರ್ದೇಶಕರು(ಶುಶ್ರೂಷ ಶಿಕ್ಷಣ ಮತ್ತು ಶುಶ್ರೂಷ ತರಬೇತಿ) ಹುದ್ದೆಗೆ ಆಡಳಿತ ಹಿತದೃಷ್ಟಿಯಿಂದ ಪದೋನ್ನತಿ ನೀಡುವ ಸಲುವಾಗಿ ಈ ಕೆಳಗೆ ಕಾಣಿಸಿದ ಮಾಹಿತಿಯನ್ನು ಶುಶ್ರೂಷ ಅಧೀಕ್ಷಕರು ದರ್ಜೆ-1ರ ಅಧಿಕಾರಿಗಳ ಗಮನಕ್ಕೆ ತಂದು ದಿನಾಂಕ:26.12.2016 ರೊಳಗೆ ತಪ್ಪದೇ ಪಡೆದು ಕಳುಹಿಸುವುದು.

| | |
|---|---|
| 01 | ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ ಶುಶ್ರೂಷ ಅಧೀಕ್ಷಕರು ದರ್ಜೆ-1ರ ಹುದ್ದೆಯಲ್ಲಿ 05 ವರ್ಷಗಳ ಸೇವೆ ಸಲ್ಲಿಸಿದವರಿಗೆ ಹಿರಿಯ ಸಹಾಯಕ ನಿರ್ದೇಶಕರ ಹುದ್ದೆಗೆ ಪದೋನ್ನತಿ ನೀಡಲು ನಿಯಮದಲ್ಲಿ ಅವಕಾಶ ಇರುತ್ತದೆ. ಆದ್ದರಿಂದ ವೃಂದ ಮತ್ತು ನೇಮಕಾತಿ ನಿಯಮದ ಪ್ರಕಾರ ಉಲ್ಲೇಖದ ಜೇಷ್ಠತಾ ಪಟ್ಟಿಯಲ್ಲಿ ಕ್ರ.ಸಂ.01 ರಿಂದ ಕ್ರ.ಸಂ.11ರವರೆಗೆ ಮಾತ್ರ ಪದೋನ್ನತಿಗೆ ಅರ್ಹರಿರುತ್ತಾರೆ. ಆದ್ದರಿಂದ ಸದರಿ ನೌಕರರು ಕೆಳಗಿನ ದಾಖಲಾತಿಗಳನ್ನು ಮೇಲಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು. <[illegible]> |
| 02 | 05 ವರ್ಷಗಳ ರಹಸ್ಯ ವರದಿ (2011-12 ರಿಂದ 2015-16)ಸಲ್ಲಿಸುವುದು. ಪ್ರತಿ ವರ್ಷಕ್ಕೆ ಪ್ರತ್ಯೇಕ ಕಾರ್ಯನಿರ್ವಹಣಾ ವರದಿಗಳನ್ನು ಮೇಲಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು.<br>ವಿಶೇಷ ಸೂಚನೆ:- ವಿಶೇಷ ಕಾರ್ಯನಿರ್ವಾಹಣ ವರದಿಗಳನ್ನು ಸ್ವೀಕರಿಸುವುದಿಲ್ಲ. |
| 03 | ಸದರಿ ಜೇಷ್ಠತಾ ಸಂಖ್ಯೆಯನ್ನು ನಮೂದಿಸುವುದು. |
| 04 | ಬಿ.ಎಸ್ಸಿ(ನರ್ಸಿಂಗ್) ತೇರ್ಗಡೆ ಹೊಂದಿರುವ ಪ್ರಮಾಣ ಪತ್ರ, ಎಸ್.ಎಸ್.ಎಲ್.ಸಿ ಅಂಕಪಟ್ಟಿ, ಕನ್ನಡ ಇಲಾಖಾ ಪರೀಕ್ಷೆ ತೇರ್ಗಡೆ ಹೊಂದಿರುವ ಬಗ್ಗೆ ವಿನಾಯಿತಿ ಪ್ರಮಾಣ ಪತ್ರ ಮತ್ತು ಶುಶ್ರೂಷಕ ಅಧೀಕ್ಷಕ ದರ್ಜೆ-1 ಹುದ್ದೆಗೆ ಪದೋನ್ನತಿ ನೀಡಲಾದ ಆದೇಶದ ಪ್ರತಿಯನ್ನು ಮೇಲಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು. |
| 05 | ರಾಜ್ಯ ಶುಶ್ರೂಷ ಪರಿಷತ್ತಿನ ನೋಂದಣಿ ಪ್ರಮಾಣ ಪತ್ರವನ್ನು ಮೇಲಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು. |
| 06 | ಸೇವೆಗೆ ಸೇರುವಾಗ ಯಾವ ಪ್ರವರ್ಗದಲ್ಲಿ ಆಯ್ಕೆಯಾಗಿದ್ದಾರೆ? ಆ ಬಗ್ಗೆ ಸೇವಾಪುಸ್ತಕದಲ್ಲಿ ನಮೂದಿಸಿರುವ ನಕಲು ಪ್ರತಿ ಹಾಗೂ ಜಾತಿ ಪ್ರಮಾಣ ಪತ್ರವನ್ನು ಮೇಲಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು. |
| 07 | ನೌಕರರ ವಿರುದ್ಧ ಇಲಾಖಾ ವಿಚಾರಣೆ ಅಥವಾ ನ್ಯಾಯಾಂಗ ತನಿಖೆ ಬಾಕಿ ಇಲ್ಲದಿರುವ ಬಗ್ಗೆ ದೃಢೀಕರಣ ಪತ್ರವನ್ನು ಮೇಲಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು. |
| 08 | ಖಾಯಂ ಪೂರ್ವ ಸೇವಾ ದೃಢೀಕರಣ ಪ್ರಮಾಣ ಪತ್ರವನ್ನು ಮೇಲಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು. |
| 09 | ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್ ಹಾಗೂ ಜನರಲ್ ಲಾ ಭಾಗ-1 ತೇರ್ಗಡೆಯಾದ ಬಗ್ಗೆ ಪ್ರಮಾಣ ಪತ್ರವನ್ನು ಮೇಲಾಧಿಕಾರಿಗಳಿಂದ ದೃಢೀಕರಿಸಿ ಸಲ್ಲಿಸುವುದು. |

---2

ಈ ಮೇಲ್ಕಂಡಂತೆ ವಿವರಿಸಿದ ಮಾಹಿತಿಯನ್ನು ಪೂರ್ಣವಾಗಿ ಕಳುಹಿಸುವುದು. ಅಪೂರ್ಣವಾಗಿದ್ದಲ್ಲಿ ಪದೋನ್ನತಿಗೆ ಪರಿಗಣಿಸುವುದಿಲ್ಲ ಹಾಗೂ ಸಕಾಲದಲ್ಲಿ ಪೂರ್ಣ ಪ್ರಮಾಣದ ದಾಖಲೆಗಳೊಂದಿಗೆ ನಿಗಧಿತ ದಿನಾಂಕದೊಳಗೆ ಪ್ರಸ್ತಾವನೆ ತಲುಪದಿದ್ದಲ್ಲಿ ಪದೋನ್ನತಿಯಿಂದ ಅವರ ಹೆಸರನ್ನು ಕೈಬಿಡಲಾಗುವುದು. ಈ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಹೂಡಲು ಅನುಮತಿ ನೀಡಲಾಗುವುದಿಲ್ಲ ಹಾಗೂ ಮುಂದಿನ ಆಗುಹೋಗುಗಳಿಗೆ ತಮ್ಮನ್ನೇ ಪೂರ್ಣಹೊಣೆಗಾರರನ್ನಾಗಿ ಮಾಡಲಾಗುವುದು. ಕಾರ್ಯನಿರ್ವಹಣಾ ವರದಿಗಳನ್ನು ಸಲ್ಲಿಸಿದ ಕೂಡಲೇ ಪದೋನ್ನತಿಗೆ ಅರ್ಹರೆಂದು ಭಾವಿಸತಕ್ಕದ್ದಲ್ಲ.

ಆಯುಕ್ತರು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.
ಬೆಂಗಳೂರು.

**<u>ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:</u>**

1. ಡೀನ್/ನಿರ್ದೇಶಕರು,------------------------------------------------
   ----------------------------------------------------
2. ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ____________
3. ವೈದ್ಯಕೀಯ ಅಧೀಕ್ಷಕರು, ________________
4. ಜಿಲ್ಲಾ ಆಕುಕ ಅಧಿಕಾರಿಗಳು ____________________
5. ಪ್ರಾಂಶುಪಾಲರು, ಶುಶ್ರೂಷಾ ತರಬೇತಿ ಶಾಲೆ/ಶುಶ್ರೂಷ ಮಹಾವಿದ್ಯಾಲಯ----------
6. ಆಡಳಿತ ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ,____________
7. ಅಧೀಕ್ಷಕರು ಕರ್ನಾಟಕ ಮಾನಸಿಕ ಆರೋಗ್ಯ ಸಂಸ್ಥೆ, ಧಾರವಾಡ.
8. ಆಡಳಿತ ವೈದ್ಯಾಧಿಕಾರಿ, ಎಂ.ಜಿ.ಎಂ.ಟಿ.ಬಿ.ಆಸ್ಪತ್ರೆ, ಬಿಜಾಪುರ.
9. ಆಡಳಿತ ವೈದ್ಯಾಧಿಕಾರಿ, ಸರ್ಕಾರಿ ವೆಲ್ಲೆಸ್ಲಿ ಟ.ಬಿ.ಆಸ್ಪತ್ರೆ, ಬಳ್ಳಾರಿ.
10. ಆಡಳಿತ ವೈದ್ಯಾಧಿಕಾರಿ, ಟಿ.ಬಿ.ಆಸ್ಪತ್ರೆ/ಮೂಡಶೆಡ್ಡೆ, ಮಂಗಳೂರು/ಟಿ.ಬಿ.ಆಸ್ಪತ್ರೆ, ಮಂಡ್ಯ/ಟಿ.ಬಿ.ಆಸ್ಪತ್ರೆ, ದಾವಣಗೆರೆ/ಕೆ.ಎನ್.ಟಿ.ಬಿ.ಆಸ್ಪತ್ರೆ, ಕೋಲಾರ.
11. ಕಛೇರಿ ಪ್ರತಿ./ ಆದೇಶದ ಪ್ರತಿ.